

ಚನ್ನಕೇಶವ ದೇವಾಲಯ

ಮೈಯೊಡ್ಡದೆ ಮನುಷ್ಯನ ಕೈಚಳಕಕ್ಕೆ ಸಿಲುಕದೆ ಸುಸ್ಥಿತಿಯಲ್ಲಿ ಉಳಿದುಕೊಂಡಿವೆ. ಚಾಮುಂಡೇಶ್ವರಿಯಿಂದ ಸಂಹಾರಕ್ಕೆ ಈಡಾಗುವ ಮುನ್ನ ಮಹಿಷಾಸುರ ಎಮ್ಮೆಯ ಶರೀರದಿಂದ ಹೊರಬಂದು ನಿಜರೂಪದಲ್ಲಿ ಕಾಣಿಸಿಕೊಂಡಿರುವ ಶಿಲ್ಪದ ಕಲ್ಪನೆಯಂತೆಯೇ ರಚನೆಯೂ ಅದ್ಭುತ. ಶಿವದೇಗುಲದ ಮಧ್ಯಮಂಟಪದಲ್ಲಿರುವ ನಂದಿ, ಒಳಗುಡಿಯ ಬಾಗಿಲುವಾಡದಲ್ಲಿರುವ ಶಿವನ ಕುಟುಂಬಪರಿವಾರದ ಚಿತ್ರಣ ಆಕರ್ಷಕವಾಗಿವೆ.

ಶಿವದೇಗುಲದಲ್ಲಿ ಶಿವನ ವಿವಿಧ ಲೀಲಾಮೂರ್ತಿಗಳೂ ಕೇಶವಗುಡಿಯಲ್ಲಿ ವಿಷ್ಣುವಿನ ವಿವಿಧರೂಪಗಳೂ ರಾರಾಜಿಸಿವೆ. ಮಳೆಗಾಳಿಗಳ ಪರಿಣಾಮವಾದ ಸವೆತ, ಕಡಿತಬಡಿತಗಳ ದೆಸೆಯಿಂದ ಹಲಮೂರ್ತಿಗಳು ಭಗ್ನವಾಗಿದ್ದರೂ ತಮ್ಮ ಪೂರ್ವಸೌಂದರ್ಯವನ್ನು ಆದಷ್ಟು ಪ್ರಕಟಪಡಿಸುತ್ತವೆ. ಅರ್ಜುನನ ಬಿಲ್ವಿದ್ಯಾ ಕೌಶಲದಂತಹ ನಿರೂಪಕಶಿಲ್ಪಗಳ ಜೊತೆ ಮಿಥುನಶಿಲ್ಪಗಳೂ ಕಾಣಸಿಗುತ್ತವೆ. ಗುಡಿಯ ಅಧಿಷ್ಠಾನ ಅಂದರೆ ಹೊರಜಗುಲಿಯ ಒರಗುಗೋಡೆಯ ಮೇಲೂ ಶಿಲ್ಪಾಕಾರ ಮೂಡಿಸಿರುವ ಹಲವು ಕೆತ್ತನೆಗಳು ಬೆರಗುಹುಟ್ಟಿಸುತ್ತವೆ.

ಈ ದೇಗುಲಗಳಿಗೆ ಸಂಬಂಧಿಸಿದಂತೆ ಇನ್ನೆರಡು ಅಂಶಗಳನ್ನು ನೀವು ಗಮನಿಸಬೇಕು. ಎರಡರ ಗೋಪುರದ ಮೇಲಿನ ಕಲಶಗಳೂ ಸುಸ್ಥಿತಿಯಲ್ಲಿ ಉಳಿದುಕೊಂಡಿವೆ. ಬಹುಶಃ ಹೊಯ್ಸಳ ದೇಗುಲಗಳಲ್ಲಿ ಉಳಿದುಕೊಂಡಿರುವ ಈ ಮಾದರಿಯ ಭವ್ಯಕಳಶಗಳು ಇವೆರಡೇ ಇರಬೇಕು. ಈ ಕಲಶಗಳನ್ನು ಹೊತ್ತ ಗೋಪುರದ ಮುಂಭಾಗದಲ್ಲಿ ಶುಕನಾಸಿಯ ಮೇಲುಗಡೆ ಅಳವಡಿಸಿರುವ ಹೊಯ್ಸಳ ಲಾಂಛನವೂ ಭವ್ಯವಾಗಿದೆ.

ಮೊಸಳೆ ಗ್ರಾಮದ ಈ ಪಾರಂಪರಿಕ ಕಟ್ಟಡಗಳನ್ನೂ ಇಂತಹ ಇನ್ನಿತರ ಸ್ಮಾರಕಗಳನ್ನೂ ಮುಂದಿನ ತಲೆಮಾರಿಗಾಗಿ ಇನ್ನಷ್ಟು ಪರಿಣಾಮಕಾರಿಯಾಗಿ ರಕ್ಷಿಸಿಕೊಳ್ಳುವ ಅಗತ್ಯವಿದೆ. ನೋಡಲು ಬಂದವರು ಈ ವಿಗ್ರಹಗಳನ್ನು ಹಾಳು ಮಾಡಿರುವ, ದೇವಾಲಯದ ಗೋಡೆಗಳನ್ನು ಅಂದಗೆಡಿಸಿ ಮನೋವಿಕಾರ ಪ್ರದರ್ಶಿಸಿರುವ, ದೇಗುಲಗಳ ಆವರಣವನ್ನು ಅತಿಕ್ರಮಿಸಿರುವ ಅಸಂಖ್ಯ ಉದಾಹರಣೆಗಳಿವೆ. ಸ್ಥಳೀಯರು ತಮ್ಮ ಊರಿನ ಈ ಗುಡಿಗಳನ್ನು ಸಂರಕ್ಷಿಸುವ ಆಸಕ್ತಿ ತೋರಿರಬಹುದು. ಆದರೆ, ರಕ್ಷಣೆ, ಜೀರ್ಣೋದ್ಧಾರ, ನಿರ್ವಹಣೆ ಇವೆಲ್ಲ ಸ್ಥಳೀಯರಿಂದಲೇ ಆಗುವ ಕೆಲಸವಲ್ಲ. ಈ ಶಿಲ್ಪಗಳಿರುವ ಬೇಲೂರು, ಹಳೆಯಬೀಡುಗಳಂಥ ಕೆಲವು ಊರುಗಳು ಮಾತ್ರ ಹೆಚ್ಚಿನ ಮುತುವರ್ಜಿಗೆ ಒಳಪಟ್ಟಿರುವುದು ನಿಜ. ಆದರೆ, ಶಿಲ್ಪದೇಗುಲಗಳಿರುವ ಬಹುತೇಕ ಸ್ಥಳಗಳು ಸ್ಥಳೀಯರ ಆಸಕ್ತಿಯಿದ್ದರೂ ಸರ್ಕಾರ, ಇಲಾಖೆಗಳ ಪರಿಣಾಮಕಾರಿ ಉಸ್ತುವಾರಿಯಿಲ್ಲದೆ ಸೊರಗುತ್ತಿವೆ.

ಸಂಪರ್ಕರಸ್ತೆ, ಮಾಹಿತಿ, ಪ್ರಚಾರಗಳ ಕೊರತೆಯೂ ಈ ಅವಜ್ಞೆಗೆ ಕಾರಣ. ಪ್ರವಾಸೋದ್ಯಮ ಇಲಾಖೆ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಂಡರೆ ಸ್ಥಳ ವೀಕ್ಷಣೆಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಿ ಸ್ಥಳೀಯರ ಉಪವರಮಾನಕ್ಕೂ ಅವಕಾಶವೊದಗೀತು. ಈ ಅದ್ಭುತ ನಿರ್ಮಾಣದಲ್ಲಿ ಅಂದಿನವರು ತೋರಿದ ಆಸ್ಥೆಯ ಸ್ವಲ್ಪ ಅಂಶವನ್ನಾದರೂ ಸರ್ಕಾರವೂ ತೋರಿ ಈ ಅಪೂರ್ವ ಸಂಪತ್ತನ್ನು ರಕ್ಷಿಸಿಕೊಳ್ಳಲು ಮುಂದಾಗಬೇಕಾದುದು ಅತ್ಯವಶ್ಯಕ.

ಮಹಿಷಾಸುರಮರ್ದಿನಿ



ದೇಗುಲಕ್ಕೆ ವಿಶಿಷ್ಟವಾದ ಕಳಶ



ಶಿವದೇಗುಲದ ಗೋಪುರದಲ್ಲಿ ಬ್ರಹ್ಮಾದಿ ದೇವತೆಗಳು

